KAKP200002162012

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕುಷ್ಟಗಿ.**

**ದಿನಾಂಕಃ 01 ನೇ ಏಪ್ರೀಲ್, 2026**

**ಅಪರಾಧಿಕ ಪ್ರಕರಣ ಸಂಖ್ಯೆಃ347/2012**

| | | |
|---|---|---|
| ಫಿರ್ಯಾದುದಾರರು | ಃ | ಸರ್ಕಾರದ ಪರವಾಗಿ,<br>ಆರಕ್ಷಕ ಉಪನಿರೀಕ್ಷಕರು,<br>ಹನಮಸಾಗರ ಪೊಲೀಸ್ ಠಾಣೆ,<br>ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ |

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

| | | |
|---|---|---|
| ಆರೋಪಿ 1 | ಃ | ಶರಣಪ್ಪ |
| ತಂದೆ | ಃ | ಬಸಪ್ಪ ದೊರೆಗೋಳ |
| ವಾಸ | ಃ | ಗುಡ್ಡದ ದೇವಲಾಪುರ, ತಾಃಕುಷ್ಟಗಿ, ಜಿಃಕೊಪ್ಪಳ. |

| | | |
|---|---|---|
| ಆರೋಪಿ 2 | ಃ | ಯಲ್ಲವ್ವ (ಮೃತಪಟ್ಟಿರುತ್ತಾರೆ). |
| ಗಂಡ | ಃ | ಬಸಪ್ಪ ದೊರೆಗೋಳ |
| ವಾಸ | ಃ | ಗುಡ್ಡದ ದೇವಲಾಪುರ, ತಾಃಕುಷ್ಟಗಿ, ಜಿಃಕೊಪ್ಪಳ. |

**(1 ನೇ ಆರೋಪಿ ಪರಃ ಶ್ರೀ.ಪಿ.ಎನ್.ಜಿ., ವಕೀಲರು)**

| | | |
|---|---|---|
| ಅಪರಾಧ ನಡೆದ ದಿನಾಂಕ | : | 07.06.2012 |
| ಅಪರಾಧ ವರದಿಯಾದ ದಿನಾಂಕ | : | 12.06.2012 |
| ಆರೋಪಿತರು ದಸ್ತಗಿರಿಯಾದ ದಿನಾಂಕ | : | ಜಾಮೀನಿನ ಮೇಲೆ ಇರುತ್ತಾರೆ |
| ಅಂತಿಮವರದಿ ಸಲ್ಲಿಸಿದ ದಿನಾಂಕ | : | 14.07.2012 |
| ದೋಷಾರೋಪಣೆ ರಚಿಸಿದ ದಿನಾಂಕ | : | 05.02.2015 |
| ಫಿರ್ಯಾದುದಾರರ ಹೆಸರು | : | ಶ್ರೀಮತಿ.ರಂಗವ್ವ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 26.12.2024 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 16.03.2026 |
| ತೀರ್ಪನ್ನು ಖಾಯ್ದಿರಿಸಿದ ದಿನಾಂಕ | : | 24.03.2026 |
| ತೀರ್ಪನ್ನು ಘೋಷಿಸಿದ ದಿನಾಂಕ | : | 01.04.2026 |
| ಅಪರಾಧ ಕಾಯ್ದೆ ಮತ್ತು ಕಲಂ | : | ಭಾರತೀಯ ದಂಡ ಸಂಹಿತೆ ಕಲಂ.498(ಎ) 323, 504, 506 ಸಹವಾಚಕ ಕಲಂ.34 |
| ಶಿಕ್ಷೆ ಆದೇಶ ವಿಧಿಸಿದ ದಿನಾಂಕ ಯಾವುದಾದರೂ ಇದ್ದರೆ | | - |

| ಆರೋಪಿತರ ಶ್ರೇಣಿ | ಆರೋಪಿತರ ಹೆಸರು | ಬಂಧನದ ದಿನಾಂಕ | ಜಾಮೀನಿನ ಮೇಲೆ ಬಿಡುಗಡೆಯಾದ ದಿನಾಂಕ | ಆರೋಪಿತರ ಮೇಲೆ ಆಪಾದಿಸಲಾದ ಅಪರಾಧಗಳು | ಖುಲಾಸೆಯೇ ಅಥವಾ ಶಿಕ್ಷೆಯೇ | ಶಿಕ್ಷೆವಿಧಿಸಲಾಗಿದೆಯೇ | ದಂ.ಪ್ರ.ಸಂ. ಕಲಂ 428 ರ ರೀತ್ಯಾ ವಿಚಾರಣೆಯ ಸಮಯದಲ್ಲಿ ಬಂಧನಕ್ಕೊಳಗಾದ ಅವಧಿ |
|---|---|---|---|---|---|---|---|
| **1** | ಶರಣಪ್ಪ | ಇಲ್ಲ | -- | ಭಾರತೀಯ ದಂಡ ಸಂಹಿತೆ ಕಲಂ.498(ಎ) 323, 504, 506 ಸಹವಾಚಕ ಕಲಂ.34 | ಖುಲಾಸೆ | ಇಲ್ಲ | ಅನ್ವಯಿಸುವುದಿಲ್ಲ |

| | | | | | | | |
|---|---|---|---|---|---|---|---|
| **2** | ಯಲ್ಲವ್ವ | ಇಲ್ಲ | -- | ಭಾರತೀಯ ದಂಡ ಸಂಹಿತೆ ಕಲಂ.498(ಎ) 323, 504, 506 ಸಹವಾಚಕ ಕಲಂ.34 | ಖುಲಾಸೆ | ಇಲ್ಲ | ಅನ್ವಯಿಸುವುದಿಲ್ಲ |

**(ಮಹಾಂತೇಶ ಚೌಲಗಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,ಗಳು ಕುಷ್ಟಗಿ.**

# <u>ತೀರ್ಪು</u>

ಆರೋಪಿತರು ಭಾರತ ದಂಡ ಸಂಹಿತೆ ಕಲಂ.498(ಎ) 323, 504, 506 ಸಹವಾಚಕ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಆರಕ್ಷಕ ಉಪನಿರೀಕ್ಷಕರು, **ಹನಮಸಾಗರ ಪೊಲೀಸ್ ಠಾಣೆ**ರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** <u>ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶಃ</u>

ದಿನಾಂಕಃ**07.06.2012** ರಂದು ಬೆಳಿಗ್ಗೆ **10-00** ಗಂಟೆಯ ಸುಮಾರಿಗೆ ಆರೋಪಿತರು ಕೂಡಿಕೊಂಡು ಚಾಸಾ**-1** ರವರಿಗೆ ನಿನಗೆ ಮನೆಯಲ್ಲಿ ಸರಿಯಾಗಿ ಕೆಲಸ ಮಾಡಲು ಬರುವುದಿಲ್ಲ ಲೇ ಸೂಳೆ ನೀನು ನಮಗೆ ಜೋಡಾಗಿ ಜೀವ ತಿನ್ನುತ್ತಿ ಹಾಳಾಗಿ ನಿನ್ನ ತವರು ಮನೆಗೆ ಹೋಗಲೇ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ**,** ಚಾಸಾ**-1** ರವರಿಗೆ ಹಿಡಿದು ಎಳೆದಾಡಿ**,** ಬೆನ್ನಿಗೆ ಮೈಗೆ ಹೊಡೆ**-**ಬಡೆ ಮಾಡಿ ಚಾಸಾ**-1** ರವರಿಗೆ ಆರೋಪಿತರು ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡಿ**,** ಚಾಸಾ**-1** ರವರಿಗೆ ಹಿಡಿದು ಎಳೆದಾಡಿ ಕೈಯಿಂದ ಮೈ**-**ಕೈಗೆ ಹೊಡೆ**-**ಬಡೆ ಮಾಡಿ**,** ಅವಾಚ್ಯ

ಶಬ್ದಗಳಿಂದ ನಿಂದಿಸಿ**,** ಜೀವ ಬೆದರಿಕೆಯನ್ನು ಹಾಕಿದ್ದು ಇರುತ್ತದೆ ಅಂತಾ ಆರಕ್ಷಕ ಉಪನಿರೀಕ್ಷಕರು**,** ಹನಮಸಾಗರ ಪೊಲೀಸ್ ಠಾಣೆರವರು ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ **ಕಲಂ.498(ಎ) 323, 504, 506 ಸಹವಾಚಕ ಕಲಂ.34** ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ**.**

**3.** ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಹನಮಸಾಗರ ಪೊಲೀಸರು, ತಮ್ಮ ಠಾಣಾ ಅಪರಾಧಿಕ ಕ್ರಮ ಸಂಖ್ಯೆ **61/2012** ಭಾರತ ದಂಡ ಸಂಹಿತೆ **ಕಲಂ.498(ಎ) 323, 504, 506 ಸಹವಾಚಕ ಕಲಂ.34** ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ**.**

**4.** ತನಿಖಾಧಿಕಾರಿಗಳು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ, ಪಂಚರ ಸಮಕ್ಷಮ ಸ್ಥಳ ಮಹಜರನ್ನು ತಯಾರಿಸಿ, ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡು ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ **ಕಲಂ.498(ಎ) 323, 504, 506 ಸಹವಾಚಕ ಕಲಂ.34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**5.** ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭಾರತ ದಂಡ ಸಂಹಿತೆ **ಕಲಂ.498(ಎ) 323, 504, 506 ಸಹವಾಚಕ ಕಲಂ.34** ರಡಿಯಲ್ಲಿ ಮಾಡಲಾದ ಅಪರಾಧದ ಬಗ್ಗೆ ಆರೋಪಿತರ ವಿರುದ್ಧ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಂಡು ಮತ್ತು ಪ್ರಕರಣವನ್ನು ನೋಂದಾಯಿಸಿಕೊಂಡು ಸಮನ್ಸ್ ಜಾರಿಮಾಡಿದ್ದು, ಅದರಂತೆ ಆರೋಪಿತರು ತಮ್ಮ ವಕೀಲರ ಮೂಲಕ ಹಾಜರಾಗಿದ್ದು ತದನಂತರ ಅಪರಾಧಿಕ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನಾ ದಾಖಲೆಗಳನ್ನು ಪೂರೈಸಿ, ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿರುತ್ತದೆ.

**6.** ಆರೋಪಿತರ ವಾದವನ್ನು ಆಲಿಸಿದ ನಂತರ ಭಾರತ ದಂಡ ಸಂಹಿತೆ **ಕಲಂ.498(ಎ) 323, 504, 506 ಸಹವಾಚಕ ಕಲಂ.34** ರಡಿಯಲ್ಲಿ ದೋಷಾರೋಪಣೆಯನ್ನು ಸಿದ್ಧಪಡಿಸಿ, ಓದಿ ಹೇಳಲಾಗಿ ಆರೋಪಿತರು ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಮತ್ತು ವಿಚಾರಣೆಯಾಗಬೇಕೆಂದು ಕೋರಿರುತ್ತಾರೆ.

**7.** ಅಭಿಯೋಜನೆ ಪರ ಪ್ರಕರಣವನ್ನು ರುಜುವಾತು ಪಡಿಸಲು ಒಟ್ಟು **13** ಸಾಕ್ಷಿಗಳ ಪೈಕಿ **08** ಸಾಕ್ಷಿಗಳನ್ನು **ಪ್ರಾಸಾ-1** ರಿಂದ **08** ಎಂದು, **5 ದಾಖಲೆಗಳನ್ನು ಕ್ರಮವಾಗಿ ನಿಪಿ-1** ರಿಂದ **5** ಎಂದು ಗುರುತಿಸಲಾಯಿತು. ಚಾಸಾ.10 ರವರನ್ನು ಸಾಕ್ಷಿ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ಚಾಸಾ-5, ಚಾಸಾ-6, ಚಾಸಾ-8 ಮತ್ತು ಚಾಸಾ-12 ರವರು ಮೃತಪಟ್ಟಿದ್ದರಿಂದ, ಸಾಕ್ಷಿ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ.

**8.** ಅಭಿಯೋಜನೆ ಪ್ರಕರಣ ಸಾಕ್ಷಿ ವಿಚಾರಣೆಯಲ್ಲಿ ಆರೋಪಿ ವಿರುದ್ದ ಯಾವುದೇ ವ್ಯತಿರಿಕ್ತ ಸಾಕ್ಷ್ಯಗಳು ಕಂಡುಬಂದಿರುವದರಿಂದ ಅಪರಾಧಿಕ ಪ್ರಕಿಯಾ ಸಂಹಿತೆಯ ಕಲಂ 313 ರಡಿಯಲ್ಲಿ 1ನೇ ಆರೋಪಿತನ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. 1ನೇ ಆರೋಪಿ ಅಭಿಯೋಜನೆ ಪ್ರಕರಣದ ಸಾಕ್ಷಿದಾರರು ನುಡಿದಿರುವ ಸಾಕ್ಷಿಯನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿಗಳು ಇರುವುದಿಲ್ಲ ಎಂದು ಹೇಳಿರುತ್ತಾರೆ. ಪ್ರಕರಣ ಅಧಿವಿಚಾರಣೆ ಹಂತದಲ್ಲಿರುವಾಗ 2ನೇ ಆರೋಪಿತಳು ಮರಣ ಹೊಂದಿದ್ದು, ಅವರ ವಿರುದ್ಧ ಅಧಿವಿಚಾರಣೆ ನಿಂತು ಹೋಗಿರುತ್ತದೆ.

**9.** ಅಭಿಯೋಜನೆಯು ಈ ಕೆಳಕಂಡ ಅಂಶಗಳನ್ನು ಸಂಶಯಾತೀತವಾಗಿ ನಿರೂಪಿಸುವುದೇಃ

**1.** ದಿನಾಂಕ:**07.06.2012** ರಂದು ಬೆಳಿಗ್ಗೆ **10-00** ಗಂಟೆಯ ಸುಮಾರಿಗೆ ಆರೋಪಿತರು ಸಮಾನ ಉದ್ದೇಶದಿಂದ ಕೂಡಿಕೊಂಡು ಚಾಸಾ**-1** ರವರಿಗೆ ನಿನಗೆ ಮನೆಯಲ್ಲಿ ಸರಿಯಾಗಿ ಕೆಲಸ ಮಾಡಲು ಬರುವುದಿಲ್ಲ ಲೇ ಸೂಳೆ ನೀನು ನಮಗೆ ಜೋಡಾಗಿ ಜೀವ ತಿನ್ನುತ್ತಿ ಹಾಳಾಗಿ ನಿನ್ನ ತವರು ಮನೆಗೆ ಹೋಗಲೇ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ**,** ಮಾನಸಿಕ ಮತ್ತು ದೈಹಿಕವಾಗಿ ಚಿತ್ರಹಿಂಸೆಯನ್ನು ನೀಡಿದ್ದರಿಂದ**,** ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ **498(**ಎ**)** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ**?**

**2.** ಈ ಮೇಲೆ ಹೇಳಿದ ದಿನ**,** ಸಮಯ ಹಾಗೂ ಸ್ಥಳದಲ್ಲಿ ಅಪರಾಧಿಕ ಕೃತ್ಯ ಎಸಗುವ ಸಮಾನ ಉದ್ದೇಶದಿಂದ**,** ಕೂಡಿಕೊಂಡು ಆರೋಪಿತರು ಚಾಸಾ**-1** ರವರಿಗೆ ಬೆನ್ನಿಗೆ ಮೈಗೆ ಕೈಗಳಿಂದ ಹೊಡೆ**-**ಬಡೆ ಮಾಡಿ**,** ಸ್ವ ಇಚ್ಚೆಯಿಂದ ಸಾದಾ ಸ್ವರೂಪದ ಗಾಯವನ್ನು ಉಂಟು ಮಾಡಿದ್ದು**,** ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ **323** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತಿದೆಯೇ**?**

**3.** ಈ ಮೇಲೆ ಹೇಳಿದ ದಿನ**,** ಸಮಯ ಹಾಗೂ ಸ್ಥಳದಲ್ಲಿ ಅಪರಾಧಿಕ ಕೃತ್ಯ ಎಸಗುವ ಸಮಾನ ಉದ್ದೇಶದಿಂದ**,** ಕೂಡಿಕೊಂಡು ಆರೋಪಿತರು ಚಾಸಾ**-1** ರವರಿಗೆ ಲೇ ಬೋಸೂಡಿ**,** ಲೇ ಸೂಳೆ ನಮ್ಮ ಮನೆಯನ್ನು ಬಿಟ್ಟು ನಿನ್ನ

ತವರುಮನೆಯಲ್ಲಿ ಬಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ ಶಾಂತಿಭಂಗವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ **504** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

**4.** ಈ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಕೂಡಿಕೊಂಡು, ನೀನು ಮನೆಯಲ್ಲಿದ್ದರೆ ನಿನ್ನನ್ನು ಜೀವ ಸಹಿತಬಿಡುವುದಿಲ್ಲವೆಂದು ಆರೋಪಿತರು ಚಾಸಾ.**1** ರವರ ಮನಸ್ಸಿನಲ್ಲಿ ಅಪರಾಧಿಕ ಭಯೋತ್ಪಾದನೆ ಮೂಡಿಸಿ ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **506** ಸಹ ಕಲಂ **149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತಿದೆಯೇ?

**5.** ಯಾವ ಆದೇಶ?

**10.** ಅಭಿಯೋಜನೆ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರವಾಗಿ **ಶ್ರೀ.ಪಿ.ಎನ್.ಜಿ.,** ವಕೀಲರ ವಾದವನ್ನು ಆಲಿಸಲಾಯಿತು.

**11.** ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ 1 ಃ - ನಕಾರಾತ್ಮಕವಾಗಿ

ಅಂಶ 2 ಃ - ನಕಾರಾತ್ಮಕವಾಗಿ

ಅಂಶ 3 ಃ - ನಕಾರಾತ್ಮಕವಾಗಿ

ಅಂಶ 4 ಃ - ನಕಾರಾತ್ಮಕವಾಗಿ

ಅಂಶ 5 ಃ - ಅಂತಿಮ ಆದೇಶದಂತೆ,
ಈ ಕೆಳಕಾಣಿಸಿರುವ ಕಾರಣಗಳಿಗಾಗಿ

## ಕಾರಣಗಳು

**12.** **ಅಂಶ 1 ರಿಂದ 4:-** ಈ ನಾಲ್ಕು ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು ಮತ್ತು ಸಾಕ್ಷ್ಯ ಹಾಗೂ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಏಕಕಾಲಕ್ಕೆ ಚರ್ಚಿಸಲು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

**13. ಈ ಪ್ರಕರಣದಲ್ಲಿ 1 ನೇ ಆರೋಪಿ ಮೇಲೆ ಮಾಡಲಾದಂತಹ ಆರೋಪಗಳನ್ನು ರುಜುವಾತು ಪಡಿಸಲು ಫಿರ್ಯಾದಿಯಾದ ಚಾಸಾ-1/ರಂಗವ್ವ ಇವರನ್ನು ಪ್ರಾಸಾ-4 ಎಂದು ವಿಚಾರಣೆಗೊಳಪಡಿಸಿರುತ್ತಾರೆ.** ಪ್ರಾಸಾ-4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ**-2** ರಿಂದ **09** ರವರ ಪರಿಚಯವಿರುತ್ತದೆ**.** ಈ ದಿನ ನ್ಯಾಯಾಲದ ಮುಂದೆ ಹಾಜರಿರುವ ಆರೋಪಿತರ ಪರಿಚಯ ಇರುತ್ತದೆ**.** ಸುಮಾರು 13 ವರ್ಷಗಳ ಹಿಂದೆ ನಾನು ನನ್ನ ಗಂಡನ ಜೊತೆ ಸಹಬಾಳ್ವೆ ಮಾಡಲು ಹೋಗಿದ್ದು ಸ್ವಲ್ಪ ದಿನಗಳ ಕಾಲ ಚೆನ್ನಾಗಿದ್ದು ನಂತರ ಆರೋಪಿಯು ನಾನು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಕೆಟ್ಟ ಅವ್ಯಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದನು. ಹೊಡೆ ಬಡೆ ಮಾಡಿ ನನ್ನನ್ನು ನನ್ನ ತವರು ಮನೆಗೆ ಹೋಗುವಂತೆ ಮಾಡಿರುತ್ತಾರೆ. ನಾನು ನನ್ನ ತವರು ಮನೆಯಲ್ಲಿ ವಾಸವಿದ್ದಾಗ ಆರೋಪಿತರು ಬಂದು ಇಲ್ಲಿ ಇದ್ದುಕೊಂಡು ನಮ್ಮ ಮನೆತನದ ಮಾನ ಮರ್ಯಾದೆ ಆಳುಮಾಡುತ್ತಿಯಾ ಎಂದು ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ ಹೊಡೆ ಬಡೆ ಮಾಡಿ ಹಲ್ಲೆ ಮಾಡಿ ಹೋಗಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ತಾಯಿ ಚಾಸಾ-4 ಮತ್ತು ಚಾಸಾ-5 ಮತ್ತು ಚಾಸಾ-6 ರವರು ಅಲ್ಲಿಗೆ ಬಂದು ಜಗಳ ಬಿಡಿಸಿರುತ್ತಾರೆ. ಈ

ಕುರಿತು ನಾನು ಪೋಲಿಸ ಠಾಣೆಗೆ ಆರೋಪಿತರ ವಿರುದ್ದ ದೂರು ನೀಡಿರುತ್ತೆನೆ ಎಂದು ಸಾಕ್ಷ್ಯ ನುಡಿದಿದ್ದಾರೆ.

ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.4 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ, ತಮ್ಮ ಪಾಟೀ ಸವಾಲಿನಲ್ಲಿ, ನಾನು ಪೋಲಿಸರಿಗೆ ಘಟನಾ ಸ್ಥಳವನ್ನು ತೋರಿಸಿದ್ದು, ನನ್ನ ಮತ್ತು ಪಂಚರ ಸಮಕ್ಷಮ ಪೋಲಿಸರು ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿದ್ದು, ಆದರೆ ಚಾಸಾ-2 ಮತ್ತು ಚಾಸಾ-3 ಪಂಚರು ಪೋಲಿಸರು ತಮ್ಮ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿರುವುದಿಲ್ಲವೆಂದು ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.4 ರವರನ್ನು ಪಾಟೀಸವಾಲಿಗೊಳಪಡಿಸಿದಾಗ ತಮ್ಮ ಪಾಟೀ ಸವಾಲಿನಲ್ಲಿ, ಚಿಕಿತ್ಸೆಯನ್ನು ಹನಮನಾಳ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಕುಷ್ಟಗಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿ ಐದು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದು, ಮತ್ತು ಹನಮನಾಳ ಮತ್ತು ಕುಷ್ಟಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ಕುರಿತು ಪೋಲಿಸರಿಗೆ ತಿಳಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು, ಆದರೆ ಚಿಕಿತ್ಸೆ ಪಡೆದುಕೊಂಡಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಇದಕ್ಕೆ ವ್ಯತರಿಕ್ತವಾಗಿ ಅವರ ತಾಯಿಯಾದ ಚಾಸಾ.4 ರವರು ಗುಡ್ಡದ ದೇವಲಾಪುರ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಇನ್ನುಳಿದಂತೆ ಆರೋಪಿ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆಯ ನಿರಾಕರಣೆಗಳನ್ನು ಪ್ರಾಸಾ.1 ರವರು ಅಲ್ಲಗಳೆದಿರುತ್ತಾರೆ.

**14. ಈ ಪ್ರಕರಣದ ಮಹಜರು ಸಾಕ್ಷಿದಾರರಾದ ಚಾಸಾ.2 ವೀರಭದ್ರಪ್ಪ ರವರನ್ನು ಪ್ರಾಸಾ.1 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು,** ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ ನನಗೆ ತೋರಿಸಿದ ದಾಖಲೆ ಸ್ಥಳ ಪಂಚನಾಮೆಯಾಗಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯು ತನ್ನ ಸಹಿಯನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸುಮಾರು 12 ವರ್ಷಗಳ ಹಿಂದೆ ಹನಮಸಾಗರ ಪೋಲಿಸ್ ಠಾಣೆಯಲ್ಲಿ ಪೋಲಿಸರು ಸಹಿ ಮಾಡುವಂತೆ ಸೂಚಿಸಿದ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಚಾಸಾ-1 ರವರು ನನ್ನ ಸಮಕ್ಷಮ ಯಾವುದೆ ಹಲ್ಲೆ ಘಟನೆ ಜಾಗವನ್ನು ತೋರಿಸಿರುವುದಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಯಾವುದೆ ಮಹಜರನ್ನು ಜರುಗಿಸಿ ಸ್ವತ್ತುಗಳನ್ನು ಸ್ವಾದೀನಪಡಿಸಿಕೊಂಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಈ ಮೇಲಿನಂತೆ ಪ್ರಾಸಾ.1 ರವರು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಪ್ರಾಸಾ.1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಸಹಿತ ತನ್ನ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತಗೆಯುವಲ್ಲಿ ವಿಫಲರಾಗಿರುತ್ತಾರೆ.

**15. ಈ ಪ್ರಕರಣದ ಇನ್ನೊಬ್ಬ ಮಹಜರು ಸಾಕ್ಷಿದಾರರಾದ ಚಾಸಾ.3 ಪರಸಪ್ಪ ರವರನ್ನು ಪ್ರಾಸಾ.2 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು,** ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ ನನಗೆ ತೋರಿಸಿದ ದಾಖಲೆ ಸ್ಥಳ ಪಂಚನಾಮೆಯಾಗಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯು ತನ್ನ ಸಹಿಯನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸುಮಾರು 12 ವರ್ಷಗಳ ಹಿಂದೆ

ಹನಮಸಾಗರ ಪೋಲಿಸ್ ಠಾಣೆಯಲ್ಲಿ ಪೋಲಿಸರು ಸಹಿ ಮಾಡುವಂತೆ ಸೂಚಿಸಿದ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಚಾಸಾ-1 ರವರು ನನ್ನ ಸಮಕ್ಷಮ ಯಾವುದೆ ಹಲ್ಲೆ ಘಟನೆ ಜಾಗವನ್ನು ತೋರಿಸಿರುವುದಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಯಾವುದೆ ಮಹಜರನ್ನು ಜರುಗಿಸಿ ಸ್ವತ್ತುಗಳನ್ನು ಸ್ವಾದೀನಪಡಿಸಿಕೊಂಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಈ ಮೇಲಿನಂತೆ ಪ್ರಾಸಾ.2 ರವರು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಪ್ರಾಸಾ.2 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಸಹಿತ ತನ್ನ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತಗೆಯುವಲ್ಲಿ ವಿಫಲರಾಗಿರುತ್ತಾರೆ.

**16. ಈ ಪ್ರಕರಣದ ಕೇಳಿಕೆಯ ಸಾಕ್ಷಿದಾರರಾದ ಚಾಸಾ.9 ಚಂದಪ್ಪ ರವರನ್ನು ಪ್ರಾಸಾ.5 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು,** ಪ್ರಾಸಾ.5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ರಿಂದ 8 ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದೆ ಈ ದಿನ ಆರೋಪಿತರು ಗೈರುಹಾಜರಿದ್ದು ಆರೋಪಿತರ ಪರ ವಕೀಲರು ಆರೋಪಿತರನ್ನು ಗುರುತಿಸುವಿಕೆಯ ಕುರಿತು ಯಾವುದೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನನಗೆ ಈ ಪ್ರಕರಣದ ಕುರಿತು ಏನೂ ಮಾಹಿತಿ ಇರುವುದಿಲ್ಲ. ನಾನು ಯಾವುದೆ ಘಟನೆಯನ್ನು ನೋಡಿರುವುದಿಲ್ಲ. ಪಿರ್ಯಾಧಿದಾರರು ಏಕೆ ಪಿರ್ಯಾದಿ ಸಲ್ಲಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಿಸಿ ಯಾವುದೆ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಈ ಮೇಲಿನಂತೆ ಪ್ರಾಸಾ.5 ರವರು ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಪ್ರಾಸಾ.5 ರವರನ್ನು

ಪಾಟೀ ಸವಾಲಿಗೆ ಒಳಪಡಿಸಿದರು ಸಹಿತ ತನ್ನ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತಗೆಯುವಲ್ಲಿ ವಿಫಲರಾಗಿರುತ್ತಾರೆ.

**17. ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.7 ಹನಮಪ್ಪ ರವರನ್ನು ಪ್ರಾಸಾ.3 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು,** ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ರಿಂದ, 6 ಮತ್ತು 8 ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದೆ ಈ ದಿನ ಆರೋಪಿತರು ಗೈರುಹಾಜರಿದ್ದು ಆರೋಪಿತರ ಪರ ವಕೀಲರು ಆರೋಪಿತರನ್ನು ಗುರುತಿಸುವಿಕೆಯ ಕುರಿತು ಯಾವುದೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನನಗೆ ಈ ಪ್ರಕರಣದ ಕುರಿತು ಏನೂ ಮಾಹಿತಿ ಇರುವುದಿಲ್ಲ. ನಾನು ಯಾವುದೆ ಘಟನೆಯನ್ನು ನೋಡಿರುವುದಿಲ್ಲ. ಪಿರ್ಯಾಧಿದಾರರು ಏಕೆ ಪಿರ್ಯಾದಿ ಸಲ್ಲಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಿಸಿ ಯಾವುದೆ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಈ ಮೇಲಿನಂತೆ ಪ್ರಾಸಾ.3 ರವರು ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಪ್ರಾಸಾ.3 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಸಹಿತ ತನ್ನ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತಗೆಯುವಲ್ಲಿ ವಿಫಲರಾಗಿರುತ್ತಾರೆ.

**18. ಈ ಪ್ರಕರಣದ ಚಾಸಾ-1 ರಂಗವ್ವಳ ತಾಯಿ ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.4 ಭೀಮವ್ವ ರವರನ್ನು ಪ್ರಾಸಾ.6 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು,** ಪ್ರಾಸಾ.6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ರಿಂದ 3 ಮತ್ತು ಚಾಸಾ-6 ರಿಂದ 9 ರವರ ಪರಿಚಯವಿರುತ್ತದೆ. ಚಾಸಾ-1 ನನ್ನ ಮಗಳು ಆಗಿರುತ್ತಾಳೆ. ಆರೋಪಿತರ ಪರಿಚಯವಿರುತ್ತದೆ. ಚಾಸಾ-1 ರವರನ್ನು ನನ್ನ ತಮ್ಮನಾದ 1 ನೇ ಅರೋಪಿಗೆ ಮದುವೆ ಮಾಡಿಕೊಟ್ಟಿದ್ದು 5 ವರ್ಷಗಳ ಕಾಲ ಚೆನ್ನಾಗಿ ಸಹಬಾಳ್ವೆ ಮಾಡಿದ್ದು ನಂತರ ಚಾಸಾ-1 ರವರಿಗೆ

ಹೊಡೆಯುವುದು ಬಡೆಯುವುದು, ಅವ್ಯಾಚ್ಯ ಶಬ್ದಗಳಿಂದ ಬೈಯ್ಯುವುದುಹಾಗೂ ನಿಂದಿಸುವುದು ಮತ್ತು ಜೀವ ಬೆದರಿಕೆ ಹಾಕಿರುತ್ತಾರೆ. ಚಾಸಾ-1 ರವರು ತನ್ನ ತವರು ಮನೆಯಲ್ಲಿ ವಾಸವಾಗಿರುತ್ತಾರೆ. ಈ ಕುರಿತು ಆರೋಪಿತರ ವಿರುದ್ದ ಚಾಸಾ-1 ರವರು ಪೋಲಿಸ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದಾರೆ.

ಆರೋಪಿ ಪರ ವಕೀಲರು ಪ್ರಾಸಾ.6 ರವರನ್ನು ಪಾಟೀಸವಾಲಿಗೊಳಪಡಿಸಿದಾಗ ತಮ್ಮ ಪಾಟೀ ಸವಾಲಿನಲ್ಲಿ, ಕಮಲವ್ವ ಇವಳು ಚಾಸಾ.1 ರವರಿಗೆ ಹೊಡೆ-ಬಡೆ ಮಾಡಿರುತ್ತಾಳೆ ಎಂದು ಸಾಕ್ಷ್ಯ ನುಡಿದಿದ್ದು, ಆದರೆ ಸ್ವತಃ ಫಿರ್ಯಾದಿದಾರ ರಂಗವ್ವ ರವರು ತಮ್ಮ ದೂರಿನಲ್ಲಿ ಕಮಲವ್ವಳ ಕುರಿತು ನಮೂದು ಮಾಡಿರುವುದಿಲ್ಲ. ಆದ್ದರಿಂದ, ಪ್ರಾಸಾ.6 ರವರ ಸಾಕ್ಷ್ಯದಲ್ಲಿ ಇಲ್ಲದ ಸಂಗತಿ ಕುರಿತು ಸುಧಾರಣೆ ಕಂಡುಬಂದಿರುತ್ತದೆ. ಇನ್ನುಳಿದಂತೆ ಆರೋಪಿ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆಯ ನಿರಾಕರಣೆಗಳನ್ನು ಪ್ರಾಸಾ.6 ರವರು ಅಲ್ಲಗಳೆದಿರುತ್ತಾರೆ.

**19. ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ.11 ಮಲ್ಲಪ್ಪ ರವರನ್ನು ಪ್ರಾಸಾ.7 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು,** ಪ್ರಾಸಾ.7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ10/07/2019 ರಿಂದ ಇಲ್ಲಿಯವರೆಗೂ ತಾವರಗೇರಾ ಪೋಲಿಸ ಠಾಣೆಯಲ್ಲಿ ಸಹಾಯಕ ಪೋಲಿಸ ಉಪ-ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ18/06/2012 ರಂದು ಆರೋಪಿ ತಲಾಷೆಗಾಗಿ ಹೋಗಿರುತ್ತೇನೆ. 2 ನೇ ಆರೋಪಿಯ ಕುರಿತು ಯಾವುದೆ ಮಾಹಿತಿ ದೊರೆಯದ ಕಾರಣ ಮರಳಿ ಠಾಣೆಗೆ ಬಂದು ವರದಿ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಪ್ರಾಸಾ.7 ರವರನ್ನು ಪಾಟೀ ಸವಾಲಿಗೊಳಪಡಿಸಿದರೂ ಸಹಿತ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

**20.** ಈ ಪ್ರಕರಣದ ಎರಡನೇ ತನಿಖಾಧಿಕಾರಿಯಾದ ಚಾಸಾ.13 ಮೌನೇಶ್ವರ ರವರನ್ನು ಪ್ರಾಸಾ.8 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿಕೊಂಡಿದ್ದು, ಪ್ರಾಸಾ.8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ:14.11.2011 ರಿಂದ 25.06.2014 ರವರೆಗೆ ಹನಮಸಾಗರ ಪೋಲಿಸ ಠಾಣೆಯಲ್ಲಿ ಪೋಲಿಸ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ:13.06.2012 ರಂದು ಚಾಸಾ-12 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ತನೀಖೆಯನ್ನು ಮುಂದುವರೆಸಿರುತ್ತೆನೆ. ನಂತರ ಅದೆ ದಿನ ಚಾಸಾ-1 ರವರು ತೋರಿಸಿದಂತೆ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೆನೆ. ನಂತರ ಅದೆ ದಿನ ಸಾಕ್ಷಿದಾರರಾದ ಚಾಸಾ-4 ರಿಂದ ಚಾಸಾ-6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೆನೆ. ದಿನಾಂಕ:18.06.2012 ರಂದು ಚಾಸಾ-10 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೆನೆ. ದಿನಾಂಕ:25.06.2012 ರಂದು ಸಾಕ್ಷಿದಾರರಾದ ಚಾಸಾ-7 ರಿಂದ ಚಾಸಾ-9 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೆನೆ. ನಂತರ ದಿನಾಂಕ:2.07.2012 ರಂದು ಚಾಸಾ-11 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೆನೆ. ನಂತರ ದಿನಾಂಕ:14.07.2012 ರಂದು ಸಾಕಷ್ಟು ಸಾಕ್ಷದಾರಗಳು ದೊರಕಿದ್ದರಿಂದ ಆರೋಪಿತರ ವಿರುದ್ದ ಅಂತಿಮ ದೋಷಾರೊಪಣ ಪಟ್ಟಿಯನ್ನು ಸಲ್ಲಿಸಿರುತ್ತೆನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಪ್ರಾಸಾ.8 ರವರನ್ನು ಪಾಟೀ ಸವಾಲಿಗೊಳಪಡಿಸಿದರೂ ಸಹಿತ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

ಸದರಿ ಪ್ರಕರಣದಲ್ಲಿ ಈಗಾಗಲೇ ಪ್ರತ್ಯಕ್ಷ ಸಾಕ್ಷಿದಾರರು, ಕೇಳಿಕೆಯ ಸಾಕ್ಷಿದಾರರು ಮತ್ತು ಮಹಜರು ಸಾಕ್ಷಿದಾರರು ಮತ್ತು ಚಾಸಾ.7, ಚಾಸಾ.9 ರವರು ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಕೇವಲ ಫಿರ್ಯಾದಿದಾರರು ಮಾತ್ರ ಬೆಂಬಲ ಸೂಚಿಸಿದ್ದು, ಅವರ ಸಾಕ್ಷ್ಯಗಳ ಮದ್ಯೆ

ವ್ಯತಿರಿಕ್ತ ಅಂಶಗಳು ಕಂಡುಬಂದಿರುತ್ತವೆ. ಕೇವಲ ತನಿಖಾಧಿಕಾರಿಯ ಸಾಕ್ಷ್ಯವು ಅಭಿಯೋಜನಾ ಪ್ರಕರಣಕ್ಕೆ ಸಹಾಯಕಾರಿಯಾಗಿರುವುದಿಲ್ಲ.

**21.** ಈ ಮೇಲ್ಕಂಡ ಅಂಶಗಳನ್ನು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿದಾಗ ಪ್ರಾಸಾ-1 ರಿಂದ 8 ರವರ ಸಾಕ್ಷ್ಯಗಳ ಬಗ್ಗೆ ವ್ಯತಿರಿಕ್ತ ಅಂಶಗಳು ಕಂಡುಬಂದಿದ್ದು, ಒಂದಕ್ಕೊಂದು ಪೂರಕವಾಗಿರುವುದಿಲ್ಲ. 1 ನೇ ಆರೋಪಿತನೇ ಈ ಸದರಿ ಅಪರಾಧವನ್ನು ಎಸಗಿರುತ್ತಾರೆ ಎಂದು ನಂಬುವುದು ಅಸ್ಪಷ್ಟವಾಗಿದ್ದು ಮತ್ತು 1 ನೇ ಆರೋಪಿತನೇ ಅಪರಾಧ ಎಸಗಿರುತ್ತಾರೆ ಎಂದು ಖಚಿತ ಅಭಿಪ್ರಾಯಕ್ಕೆ ಬರಲು ಸಾಕ್ಷ್ಯದಾರಗಳಿಂದ ಸಂಶಯ ಉಂಟಾಗಿರುತ್ತದೆ. ಸದರಿ ಸಂಶಯದ ಲಾಭವನ್ನು 1 ನೇ ಆರೋಪಿತನು ಪಡೆಯಲು ಅರ್ಹರಾಗಿರುತ್ತಾರೆ. ಕಡತದಲ್ಲಿನ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ್ದು, ಅಭಿಯೋಜನೆಯು 1 ನೇ ಆರೋಪಿತನ ವಿರುದ್ಧ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ. **ಆದ್ದರಿಂದ ಅಂಶ 1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

**22.** **<u>ಅಂಶ 5:-</u>** ಅಂಶ **1** ರಿಂದ **4** ಕ್ಕೆ ಈ ಮೇಲ್ಕಂಡಂತೆ ಉತ್ತರಿಸಿರುವುದರಿಂದ ಈ ಕೆಳಕಂಡಂತೆ:

## <u>ಆದೇಶ</u>

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1 ನೇ ಆರೋಪಿತನನ್ನು **ಭಾರತೀಯ ದಂಡ ಸಂಹಿತೆ ಕಲಂ. 498(ಎ), 323, 504, 506 ಸಹವಾಚಕ ಕಲಂ.34**

ರಡಿಯಲ್ಲಿ ಮಾಡಲಾದ ಆರೋಪಗಳಿಂದ ಈ ಕೂಡಲೇ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಸದರಿ ಪ್ರಕರಣದಲ್ಲಿ ತನಿಖಾ ಕಾಲಕ್ಕೆ ಯಾವುದೇ ಮುದ್ದೆ ಮಾಲುಗಳು ಲಭ್ಯವಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣದಲ್ಲಿ ಯಾವುದೇ ಮುದ್ದೆ ಮಾಲುಗಳನ್ನು ಗುರುತಿಸಲಾಗಿರುವುದಿಲ್ಲ.

MAHANTESH RAYAPPA CHOULAGI

Digitally signed by MAHANTESH RAYAPPA CHOULAGI
Date: 2026.04.02 12:59:38 +0530

ಪ್ರಕರಣ ಅಧಿವಿಚಾರಣೆ ಹಂತದಲ್ಲಿರುವಾಗ 2 ನೇ ಆರೋಪಿತಳು ಮರಣ ಹೊಂದಿದ್ದು, ಅವರ ವಿರುದ್ಧ ಅಧಿವಿಚಾರಣೆ ನಿಂತು ಹೋಗಿರುತ್ತದೆ.

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರಡಿಯಲ್ಲಿನ 1 ನೇ ಆರೋಪಿತನ ಮತ್ತು ಜಾಮೀನುದಾರನ ಜಾಮೀನು ಮುಚ್ಚಳಿಕೆಯು ಈ ತೀರ್ಪು ನೀಡಿದ 6 ತಿಂಗಳ ನಂತರ ರದ್ದಾಗುವುದು ಎಂದು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಖ್ತಲೇಖನವನ್ನು ನೀಡಿದ್ದು, ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ, ಪರಿಶೀಲಿಸಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ:01 ನೇ ಏಪ್ರಿಲ್ 2026 ರಂದು ಘೋಷಿಸಲಾಯಿತು.)

**(ಮಹಾಂತೇಶ ಚೌಲಗಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ.,ಗಳು ಕುಷ್ಟಗಿ.**

# ಅನುಬಂಧ

## ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-

| ಕ್ರಮ ಸಂಖ್ಯೆ | | ಶ್ರೇಣಿ | ಹೆಸರು | ಸಾಕ್ಷ್ಯದ ಸ್ವರೂಪ |
|---|---|---|---|---|
| 1 | | ಪ್ರಾಸಾ-1 | ವೀರಭದ್ರಪ್ಪ | ಮಹಜರು ಸಾಕ್ಷಿದಾರರು |
| 2 | | ಪ್ರಾಸಾ-2 | ಪರಸಪ್ಪ | ಮಹಜರು ಸಾಕ್ಷಿದಾರರು |
| 3 | | ಪ್ರಾಸಾ-3 | ಹನಮಪ್ಪ | ಪ್ರತ್ಯಕ್ಷ ಸಾಕ್ಷಿದಾರರು |
| 4 | | ಪ್ರಾಸಾ-4 | ರಂಗವ್ವ | ಪಿರ್ಯಾದಿ ಸಾಕ್ಷಿದಾರರು |
| 5 | | ಪ್ರಾಸಾ-5 | ಚಂದಪ್ಪ | ಸಾಕ್ಷಿದಾರರು |
| 6 | | ಪ್ರಾಸಾ-6 | ಭೀಮವ್ವ | ಪ್ರತ್ಯಕ್ಷ ಸಾಕ್ಷಿದಾರರು |
| 7 | | ಪ್ರಾಸಾ-7 | ಮಲ್ಲಪ್ಪ | ತನಿಖಾಧಿಕಾರಿ |
| 8 | | ಪ್ರಾಸಾ-8 | ಮೌನೇಶ್ವರ | 2 ನೇ ತನಿಖಾಧಿಕಾರಿ |

## ಅಭಿಯೋಜನೆಯ ಪರ ಹಾಜರುಪಡಿಸಿದ ದಾಖಲೆಗಳು:-

| ಕ್ರಮ ಸಂಖ್ಯೆ | ನಿಶಾನೆಗಳ ಸಂಖ್ಯೆ | | ವಿವರಣೆ |
|---|---|---|---|
| 1 | ನಿ ಪಿ 1 | | ಸ್ಥಳ ಪಂಚನಾಮೆ |
| 2 | ನಿ ಪಿ 2 | | ಪ್ರಾಸಾ.3 ರವರ ಹೇಳಿಕೆ |
| 3 | ನಿ ಪಿ 3 | | ದೂರು |
| 4 | ನಿ ಪಿ 4 | | ಪ್ರಾಸಾ.5 ರವರ ಹೇಳಿಕೆ |
| 5 | ನಿ ಪಿ 5 | | ಪ್ರಥಮ ವರ್ತಮಾನ ವರದಿ |

**3. ಆರೋಪಿ/ತರ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-**

---- ಇಲ್ಲ ----

**4. ಆರೋಪಿ/ತರ ಪರ ಹಾಜರುಪಡಿಸಿದ ದಾಖಲೆಗಳು:-**

---- ಇಲ್ಲ -----

**5. ನ್ಯಾಯಾಲಯದ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-**

---- ಇಲ್ಲ ----

**6. ನ್ಯಾಯಾಲಯದ ಪರ ಹಾಜರುಪಡಿಸಿದ ದಾಖಲೆಗಳು:-**

---- ಇಲ್ಲ ----

**ಅಭಿಯೋಜನೆಯ ಪರ ಗುರುತು ಮಾಡಿದ ಮುದ್ದೆ ಮಾಲುಗಳು:-**

**---- ಇಲ್ಲ ----**

MAHANTESH RAYAPPA CHOULAGI

Digitally signed by MAHANTESH RAYAPPA CHOULAGI
Date: 2026.04.02 12:59:25 +0530

**(ಮಹಾಂತೇಶ ಚೌಲಗಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,ಗಳು ಕುಷ್ಟಗಿ.**